REVIEW OF RESEARCH
ISSN: 2249-894X
IMPACT FACTOR : 5.2331(UIF)
VOLUME - 7 | ISSUE - 5 | FEBRUARY - 2018

# ಕೊಪ್ಪಳ ಜಿಲ್ಲೆಯ ಕೋಟೆಗಳು

ಶ್ರೀಮತಿ. ಶುಭಾ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಸರಕಾರಿ ಪ್ರಥಮದರ್ಜೆ ಕಾಲೇಜು, ಕೊಪ್ಪಳ.

ಕೋಪಣಾಚಲ, ಕೋಪಣತೀರ್ಥ, ಕೋಪಣ ನಗರಿ ಮತ್ತು ತಿರುಳ್ಗನ್ನಡ ನಾಡು ಎಂಬ ಹೆಸರಿನಿಂದ ಖ್ಯಾತಿ ಪಡೆದ ಕೊಪ್ಪಳ ಜಿಲ್ಲೆಯು ತನ್ನದೆಯಾದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಪ್ರದೇಶದ ಇತಿಹಾಸವು ಕ್ರಿ.ಪೂ ಯುಗದಿಂದ ಕಂಡುಬರುತ್ತದೆ. ಇಲ್ಲಿನ ಪರಿಸರದಲ್ಲಿ ಪುರಾತನ ಶಿಲಾಯುಗದ ಆದಿಮಾನವನ ಅಸ್ತಿತ್ವದ ಕುರುಹುಗಳು, ಇತಿಹಾಸ ಪೂರ್ವ ಯುಗದ ವರ್ಣ ಚಿತ್ರಗಳು, ರೇಖಾಚಿತ್ರಗಳು ಬಂಡೆಗಳ ಮೇಲೆ ಅಚ್ಚಳಿಯದೆ ಉಳಿದಿರುವದು ಕಂಡುಬಂದಿದೆ. ಕ್ರಿ.ಪೂ 2ನೇ ಶತಮಾನದಲ್ಲಿ ಅಶೋಕನು ತನ್ನ ಧರ್ಮ ಸಂದೇಶಗಳನ್ನು ಇಲ್ಲಿನ ಬಂಡೆಗಳ ಮೇಲೆ ಖಂಡರಿಸಿರುವುದನ್ನು ನೋಡಿದರೆ ಕೊಪ್ಪಳದ ಇತಿಹಾಸ ಕ್ರಿ.ಪೂ 2ನೇ ಶತಮಾನಕ್ಕೂ ಹಿಂದೆ ಬೌದ್ಧ, ಜೈನ ಧರ್ಮಗಳ ನೆಲೆವೀಡೆಂಬ ಗೌರವದ ಸ್ಥಾನ ಪಡೆದುಕೊಂಡಿದೆ. ನಂತರ ಈ ಪ್ರದೇಶವು ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು ಅವರ ಆಳ್ವಿಕೆಯ ಕಾಲಾವಧಿಯಲ್ಲಿ ಅನೇಕ ಸ್ಮಾರಕಗಳನ್ನು ನಿರ್ಮಿಸಿ ತಮ್ಮದೆಯಾದ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯನ್ನು ಮೆರೆದಿದ್ದಾರೆ.

ಜಿಲ್ಲೆಯ ಕೋಟೆಗಳನ್ನು ಇಡೀಯಾಗಿ ಸಮೀಕ್ಷಿಸಿದಾಗ ಕೊಪ್ಪಳ ಜಿಲ್ಲೆಯ ಕೋಟೆಗಳು 8–9ನೇ ಶತಮಾನದಿಂದ 19–20 ಶತಮಾನದವರೆಗೂ ಹರಡಿವೆ. ಹಿಂದೂ–ಮುಸ್ಲಿಂ ರಕ್ಷಣಾ ವಾಸ್ತು ಶೈಲಿ ಇವುಗಳಲ್ಲಿ ಬೆರೆತುದನ್ನು ಕಾಣಬಹುದು. ಈ ಕೋಟೆಗಳಲ್ಲಿ ಹಿಂದುಗಳ ಪ್ರಾಧ್ಯಾನ್ಯತೆಯ ಕಾಲದಲ್ಲಿ ದೇವಾಲಯಗಳು, ಪುಷ್ಕರಣಿಗಳು, ಕೊಳಗಳು, ವೀಕ್ಷಣಾಲಯಗಳು, ಅರಮನೆಗಳು, ಕಣಜಗಳು, ಆನೆ, ಕುದುರೆ, ಗೋವುಗಳ ದೊಡ್ಡಿಗಳು, ವೀರಗಲ್ಲುಗಳು ಸಿಗುತ್ತವೆ. ಮುಸ್ಲಿಂ ಪ್ರಾಧ್ಯಾನ್ಯತೆ ಕಾಲದಲ್ಲಿ ಮಸೀದಿಗಳು, ಬುರುಜುಗಳು, ತೋಫಖಾನೆಗಳು ತುಬಾಕಿ ತೂತುಗಳು, ಮದ್ದಿನ ಮನೆಗಳು ದೊರೆಯುತ್ತಿವೆ. ಕೊಪ್ಪಳ ಜಿಲ್ಲೆಯ ಕೋಟೆಗಳಿಗೆ ಸುಮಾರು 800 ವರ್ಷಗಳ ಇತಿಹಾಸವಿರುವುದನ್ನು ಗ್ರಂಥಗಳಿಂದ ನೋಡಬಹುದು. ನಾಡನ್ನು ಕಟ್ಟುವಲ್ಲಿ ಅವುಗಳ ಪಾತ್ರ ಬಹಳಷ್ಟಿತ್ತು. ಪ್ರಸ್ತುತ ಲೇಖನದಲ್ಲಿ ಕೊಪ್ಪಳ ಜಿಲ್ಲೆಯ ಕೋಟೆಗಳು ಅವುಗಳ ಇಂದಿನ ಸ್ಥಿತಿಗತಿಗಳು ಕುರಿತಂತೆ ಮಾಹಿತಿಯನ್ನು ಕಲೆ ಹಾಕುವ ಪ್ರಯತ್ನ ಮಾಡಲಾಗಿದೆ.

## ಕೊಪ್ಪಳದ ಕೋಟೆ:

ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಕೋಟೆಗಳಲ್ಲಿ ಕೊಪ್ಪಳ ಕೋಟೆಯು ಪ್ರಮುಖವಾಗಿದೆ. ಕೊಪ್ಪಳ ನಗರದ ಪಶ್ಚಿಮಕ್ಕೆ ಇರುವ ಕೋಟೆಯು ಏಳು ಸುತ್ತಿನ ಕೋಟೆಯಾಗಿದ್ದು ಇಂದಿಗೂ ಇದು ಪ್ರಬಲವಾಗಿದೆ. ಈ ಕೋಟೆಯನ್ನು ಸುಮಾರು 10ನೇ ಶತಮಾನದಲ್ಲಿ ಕಟ್ಟಿರಬೇಕೆಂಬ ಅಭಿಪ್ರಾಯವಿದೆ. ಅದರ ಇಂತಹ ಪ್ರಬಲವಾದ ಕೋಟೆಯನ್ನು ಯಾರು ಕಟ್ಟಿದರು ಎಂಬುದರ ಬಗ್ಗೆ ನಿಖರವಾದ ಅಭಿಪ್ರಾಯಗಳಲ್ಲಿ ಬಾದಾಮಿ ಚಾಲುಕ್ಯರ ನಂತರ ಬಂದ ರಾಷ್ಟ್ರಕೂಟರ ಕಾಲದಲ್ಲಿ ಈ ಕೋಟೆ ಬೆಳಕಿಗೆ ಬಂದಿದೆ. ತದನಂತರ ಬಹಮನಿ ಸಾಮ್ರಾಜ್ಯ, ವಿಜಯನಗರದ ಸಾಮ್ರಾಜ್ಯ, ಕಂಪಿಲರಾಯ, ಆದಿಲ್‌ಶಾಹಿ, ಮರಾಠರು, ಶಿವಾಜಿ, ಹೈದರಲಿ, ಟಿಪ್ಪುಸುಲ್ತಾನ ನಂತರ ಬ್ರಿಟಿಷರ ವಶವಾಯಿತು. 10ನೇ ಶತಮಾನದಿಂದ ಬ್ರಿಟಿಷರ ಕಾಲಾವಧಿಯವರೆಗೂ ಈ ಕೋಟೆಯು ಬದಲಾವಣೆಯನ್ನು ಹೊಂದುತ್ತಾ ಹೋಗಿರುವದನ್ನು ನೋಡಬಹುದು. ಈ ಕೋಟೆಯು ಸ್ವಾತಂತ್ರ್ಯ ಸಂಗ್ರಾಮ, ಸಿಪಾಯಿ ದಂಗೆಯಂತಹ ಸಂದರ್ಭದಲ್ಲಿ ತನ್ನ ಮಹತ್ವವನ್ನು ಮರೆದಿದೆ.



ಈ ಕೋಟೆಗೆ ಬಸದಿ, ಬುರುಜು, ಬತೇರಿ, ಕಂದಕ ದ್ವಾರಬಾಗಿಲು, ಕಾವಲುಗೋಪುರ, ಧ್ವಜ ಸ್ತಂಭಗಳು, ರಣಗೃಹಗಳನ್ನು ಯುದ್ದತಂತ್ರಕ್ಕೆ ಅನುಗುಣವಾಗಿ ನಿರ್ಮಿಸಲಾಗಿದೆ. ಈ ಕೋಟೆಯನ್ನು ಕೆಳಹಂತದಿಂದ ಮೇಲಿನ

ಹಂತದವರೆಗೆ ಹತ್ತಬಹುದಾಗಿದೆ. ಸೈನಿಕ ಕಾರ್ಯಾಚರಣೆಯ ದೃಷ್ಟಿಯಿಂದ ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಾಣಗೊಂಡ ಈ ಕೋಟೆಯು ಗಿರಿದುರ್ಗವಾಗಿದೆ. ಕೊಪ್ಪಳ ಕೋಟೆಯಲ್ಲಿರುವ ದ್ವಾರಬಾಗಿಲು, ಬುರುಜು, ಬತೇರಿ, ಕಂದಕಗಳಲ್ಲದೆ ಕೋಟೆ ಗೋಡೆಯ ವಿನ್ಯಾಸ, ವೀಕ್ಷಣಾ ಗೋಪುರಗಳು, ಧ್ವಜಸ್ತಂಬಗಳು, ರಣ ಗೃಹಗಳನ್ನು ಯುದ್ದ ತಂತ್ರಕ್ಕೆ ಅನುಗುಣವಾಗಿಯೇ ನಿರ್ಮಿಸಲಾಗಿದೆ. ಇವು ಕಾಲಾನುಕ್ರಮದಲ್ಲಿ ಬದಲಾದ ಯುದ್ದ ತಂತ್ರಕ್ಕನುಗುಣವಾಗಿ ರಚನಾ ಕ್ರಮದಲ್ಲಿ ವಿಕಾಸವಾಗಿದೆ. ಮುಖ್ಯವಾಗಿ ಅಟ್ಟಾಲಕ, ಧ್ವಜಸ್ತಂಭ, ಅಂಬುಗಿಂಡಿಗಳಲ್ಲಿ ಅವರು ರೂಪಿಸಿಕೊಂಡಿರುವ ರಕ್ಷಣಾ ತಂತ್ರಗಳು ವಿಸ್ಮಯ ಮೂಡಿಸುತ್ತದೆ. ಈ ಕೋಟೆಯನ್ನು ಕೆಳಹಂತದಿಂದ ಮೇಲಿನ ಹಂತದವರೆಗೂ ಹತ್ತಬಹುದಾಗಿದೆ.

### ಅಟ್ಟಾಲಕಗಳು:

ಕೋಟೆಗೋಡೆಯ ಮೇಲೆ ಸ್ವಲ್ಪ ಎತ್ತರವಾಗಿ ನಿರ್ಮಿಸಿರುವ ವೇದಿಕೆಗೆ ಅಟ್ಟಾಲಕವೆಂದು ಹೆಸರು. ಅಟ್ಟಾಲಕ ಗೋಡೆಯ ಹಿಂಬದಿಯಲ್ಲಿರುವ ಸೈನಿಕರು ಶತ್ರುಗಳ ಚಲನ–ವಲನ ಸೈನಿಕನ ಸಂಖ್ಯೆ ಅವರು ಪ್ರಯೋಗಿಸುತ್ತಿದ್ದ ಶಸ್ತ್ರಾಸ್ತ್ರಗಳ ಪ್ರಮುಖ ಮಾಹಿತಿಯನ್ನು ಸುಲಭವಾಗಿ ಮೇಲಿನಿಂದಲೇ ವೀಕ್ಷಿಸಿ ತಿಳಿದುಕೊಳ್ಳುತ್ತಿದ್ದರು. ನಂತರ ಕಾಳಗಕ್ಕೆ ಬೇಕಾಗುವ ಯುದ್ದ ಸಾಮಗ್ರಿಗಳನ್ನು ಅಟ್ಟಾಲಕಗಳ ಹಿಂದೆಯೇ ಸಂಗ್ರಹಿಸಿಕೊಂಡು ಯುದ್ದಕ್ಕೆ ಸಿದ್ದರಾಗುತ್ತಿದ್ದರು. ಹಾಗೆಯೇ ಇವರು ಎತ್ತರದ ಸ್ಥಳದಲ್ಲಿರುವುದರಿಂದ ಸುಲಭವಾಗಿ ಶತ್ರುಗಳ ಮೇಲೆ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು. ಒಟ್ಟಾರೆ ಅಟ್ಟಾಲಕಗಳು ಬಹುಪಯೋಗಿ ಸ್ಮಾರಕಗಳಾಗಿದ್ದು ಕೋಟೆ ರಕ್ಷಣೆಯಲ್ಲಿ ಇವುಗಳ ಪಾತ್ರ ಮಹತ್ವದಾಗಿದೆ.

### ಧ್ವಜಸ್ತಂಭ:

ಇದುವರೆಗೂ ಕರ್ನಾಟಕದ ಯಾವುದೇ ಕೋಟೆಗಳಲ್ಲಿ ಕಂಡುಬರುವ ಅಪರೂಪದ ರಚನೆಯೇ ಧ್ವಜಸ್ತಂಭಗಳು. ಕೊಪ್ಪಳ ಕೋಟೆಯಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಎಲ್ಲ ಕೋಟೆಗಳಲ್ಲಿ ಧ್ವಜಸ್ತಂಭ, ಧ್ವಜಬತೇರಿ ಅಥವಾ ಝುಂಡಾ ಬತೇರಿಗಳು ಇರುತ್ತದೆ. ಕೋಟೆಯು ಅತ್ಯಂತ ಎತ್ತರದ ಸ್ಥಳದಲ್ಲಿ ಧ್ವಜ ಹಾರಿಸಲು ಈ ರೀತಿಯ ರಚನೆಗಳನ್ನು ಮಾಡಿಕೊಂಡಿರುತ್ತಾರೆ. ಕಾರಣ ಧ್ವಜ ಆಯಾ ಸಾಮ್ರಾಜ್ಯದ ಜನತೆಯ ಆತ್ಮವಿಶ್ವಾಸದ ಸ್ವಾತಂತ್ರ್ಯದ ಪ್ರತೀಕವಾಗಿದೆ. ಧ್ವಜದ ಮೇಲೆ ನಿರ್ದಿಷ್ಟವಾದ ಕೆಲವು ಚಿಹ್ನೆಗಳು ಇರುತ್ತದೆ. ಈ ಚಿಹ್ನೆಗಳು ಆಯಾ ಸಾಮ್ರಾಜ್ಯದ ಗುರಿ ಉದ್ದೇಶಗಳ ದ್ಯೋತಕವಾಗಿರುತ್ತವೆ. ಸಾಮಾನ್ಯವಾಗಿ ಕೋಟೆಗಳಲ್ಲಿ ಧ್ವಜವನ್ನು ಹಾರಿಸಲು ಎತ್ತರವಾದ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ಬತೇರಿಯನ್ನು ಅಥವಾ ವೇದಿಕೆಯನ್ನು ನಿರ್ಮಿಸಿ ಧ್ವಜಗಳನ್ನು ಹಾರಿಸಲು ವ್ಯವಸ್ಥೆ ಮಾಡಿಕೊಂಡಿರುವುದನ್ನು ಕೊಪ್ಪಳದ ಕೋಟೆಯಲ್ಲಿ ಕಾಣಬಹುದು. ಸೈನಿಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದು ಸ್ಥಳ ಇದಾಗಿರುವದರಿಂದ ಇಲ್ಲಿ ಹಾರಾಡುವ ಧ್ವಜಗಳು ಬಹುದೂರವರೆಗೂ ಕಾಣಿಸುತ್ತಿದ್ದವು. ಏಕೆಂದರೆ ಚದುರಿದ ಸೈನ್ಯವನ್ನು ಒಂದುಗೂಡಿಸುವ ಶಕ್ತಿ ಹಾಗೂ ಹೋರಾಡುವ ಸೈನಿಕರಿಗೆ ಉತ್ತೇಜನ ಕೊಡುವ ಶಕ್ತಿ ಈ ಧ್ವಜಗಳಿಗೆ ಇರುತ್ತಿತ್ತು. ಕೋಟೆಗಳ ಅಳಿವು–ಉಳಿವು ಕೆಲವೊಮ್ಮೆ ಈ ಧ್ವಜವನ್ನೆ ಅವಲಂಬಿಸುತ್ತಿತ್ತು. ಗೆದ್ದವರು ಸೋತವರ ಧ್ವಜವನ್ನು ಕೆಳಗಿಳಿಸಿ ತಮ್ಮ ಧ್ವಜವನ್ನು ಎತ್ತಿ ನಿಲ್ಲಿಸಿದಾಗಲೇ ಅಂತಿಮವಾಗಿ ಯುದ್ದ ನಿಲ್ಲುತ್ತಿತ್ತು.

ಹೀಗೆ ಕೋಟೆ ಕಾಳಗದಲ್ಲಿ ಈ ರೀತಿಯ ಧ್ವಜ ಸ್ತಂಬಗಳು ನಿರ್ಣಾಯಕ ಪಾತ್ರ ವಹಿಸುತ್ತಿದ್ದವು. ಒಟ್ಟಾರೆ ಯುದ್ದತಂತ್ರ ದೃಷ್ಟಿಯಿಂದ ನಿರ್ಮಾಣವಾದ ಕೊಪ್ಪಳ ಕೋಟೆಯ ಪ್ರತಿಯೊಂದು ಅಂಗವೂ ಅಧ್ಯಯನಕ್ಕೆ ಯೋಗ್ಯವಾಗಿದ್ದು, ಧ್ವಜಸ್ತಂಭ ಅಟ್ಟಾಲಕ ರೀತಿಯಲ್ಲಿ ಕಂದಕ, ದ್ವಾರಬಾಗಿಲು, ಅಂಬುಗಿಂಡಿಗಳು ಇತರೆ ಸ್ಮಾರಕಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವ ಅಗತ್ಯವಿದೆ. ಈ ಕೋಟೆಯನ್ನು ಕುರಿತಂತೆ ಬ್ರಿಟಿಷ ಅಧಿಕಾರಿ ಜಾನ ಮುಲ್ಕಂ ಎಂಬುವರು "ಭಾರತದ ಅಭೇದ್ಯ ಕೋಟೆಗಳಲ್ಲಿ ಇದು ಒಂದು" ಎಂದಿದ್ದಾರೆ.

ಈ ಕೋಟೆಯ ಸುತ್ತ ಮುತ್ತ ವಾಸಿಸಿರುವ ಜನರು ಕೋಟೆಗೆ ಹೋಗುವ ಮಾರ್ಗವನ್ನು ಶುಚಿಯಾಗಿಡದೇ ಕಸವನ್ನು, ದನಕರುಗಳ ಸಗಣಿಯನ್ನು ದಾರಿಯಲ್ಲಿ ಹಾಕುವ ಮೂಲಕ ಮಲೀನಗೊಳಿಸಿದ್ದಾರೆ. ಇಲ್ಲಿನ ಜನಪ್ರತಿನಿಧಿಗಳು, ಸ್ಥಳೀಯರು ಮತ್ತು ಪುರಾತತ್ವ ಇಲಾಖೆಯವರು ಈ ಕೋಟೆಗೆ ಸೂಕ್ತ ಭದ್ರತೆಯನ್ನು ಒದಗಿಸುವ ಜೊತೆಗೆ ಕೋಟೆಯ ಬಗ್ಗೆ ಸಮಗ್ರ ಮಾಹಿತಿ ನೀಡುವ ಫಲಕಗಳನ್ನು ಹಾಕಬೇಕು. ಅಲ್ಲಿ ವಾಸವಿರುವ ಜನತೆಗೆ ಈ ಕೋಟೆಯ ಪ್ರಾಮುಖ್ಯತೆ, ಅದರ ಸ್ವಚ್ಚತೆ ಮತ್ತು ರಕ್ಷಣೆಯ ಕುರಿತಂತೆ ಜಾಗೃತಿ ಮೂಡಿಸಿದರೆ ಮಾತ್ರ ಈ ಕೋಟೆಯನ್ನು ನೋಡಲು ಪ್ರವಾಸಿಗರು ಬರುತಾರೆ. ಅಲ್ಲದೆ ಈ ಕೋಟೆಯ ಸುತ್ತಲೂ ಉದ್ಯಾನವನವನ್ನು ಬೆಳೆಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದರೆ ಕೋಟೆಯು ಮತ್ತಷ್ಟು ಸುಂದರವಾಗಿ ಕಂಗೊಳಿಸುತ್ತದೆ. ಕೋಟೆಯ ಮೇಲೆ ನಿಂತು ನೋಡಿದರೆ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಮತ್ತು ಕೊಪ್ಪಳ ನಗರವನ್ನು ವೀಕ್ಷಿಸಬಹುದು.

ಕೊಪ್ಪಳ ಜಿಲ್ಲೆಯಲ್ಲಿ ಅನೇಕ ಕೋಟೆಗಳು ಕಂಡುಬರುತ್ತವೆ. ಅವುಗಳಲ್ಲಿ ಬಹಾದ್ದೂರ ಬಂಡೆ ಕೋಟೆ, ಆನೆಗೊಂದಿ ಕೋಟೆ, ಇರಕಲ್ ಗಡಾ ಕೋಟೆ, ಕನಕ ಗಿರಿ ಕೋಟೆ, ಯಲಬುರ್ಗಾ ಕೋಟೆ, ಮಾದಿನೂರು ಕೋಟೆ, ಚಿಕ್ಕಮ್ಯಾಗೇರಿ ಕೋಟೆ ಪ್ರಮುಖವಾಗಿವೆ.

**ಬಹಾದ್ದೂರ ಬಂಡೆ ಕೋಟೆ:**

ಕೊಪ್ಪಳ ಜಿಲ್ಲೆಯಲ್ಲಿ ಕಂಡು ಬರುವ ಕೋಟೆಗಳಲ್ಲಿ ಇದು ಅತ್ಯಂತ ಪ್ರಮುಖವಾಗಿದೆ. ಇದನ್ನು ಹೈದರಲಿಯು ಕಟ್ಟಿಸಿದ ಬಗ್ಗೆ ಶಾಸನಗಳು ಮಾಹಿತಿ ನೀಡುತ್ತವೆ. ಹೈದರಲಿಯು ಬಂಡೆಗಲ್ಲಿನ ಮೇಲೆ ಇದನ್ನು ಕಟ್ಟಿಸಿರುವದರಿಂದ ಇದಕ್ಕೆ "ಬಹಾದ್ದೂರ ಬಂಡೆ" ಎಂಬ ಹೆಸರು ಬಂದಿದೆ. ಇದೊಂದು ಗಿರಿದುರ್ಗ ಎತ್ತರವಾದ ಅಖಂಡ ಕಲ್ಲಿನ ಮೇಲೆ ನಿಂತಂತಿದೆ. ಹೈದರಲಿಯ ಆಳ್ವಿಕೆಯ ಕಾಲದಲ್ಲಿ ಶೇಖ ಮಹಮ್ಮದ ಖಾನ್ ಎಂಬ ಕೊಪ್ಪಳ ಕೋಟೆಯ ಮೇಲ್ವಿಚಾರಕನ ಉಸ್ತುವಾರಿಯಲ್ಲಿ ಬಹಾದ್ದೂರ ಬಂಡೆಯನ್ನು ನಿರ್ಮಿಸಲಾಯಿತು. ಈ ಕೋಟೆಯನ್ನು ಎರಡು ಸುತ್ತಿನಲ್ಲಿ ನಿರ್ಮಿಸಲಾಗಿದೆ.

ಇಲ್ಲಿನ ಕೋಟೆಗೋಡೆಗೆ ಚೌಕಾಕಾರದ ದಪ್ಪನೆಯ ಕಲ್ಲುಗಳನ್ನು ಉಪಯೋಗಿಸಲಾಗಿದೆ ನಡುವೆ ಯಾವುದೇ ಗಾರೆ, ಸಿಮೆಂಟನ್ನು ಕೆಸರನ್ನು ಮಿಶ್ರಣ ಮಾಡಿಲ್ಲ. ಈ ಕೋಟೆಯಲ್ಲಿ ಹಿರಿದಾದ ಮತ್ತು ಕಿರಿದಾದ ಅನೇಕ ಬಾಗಿಲುಗಳು ಕಂಡುಬರುತ್ತದೆ ಬಾಗಿಲುಗಳು ಮೇಲೆ ಅಲಂಕಾರಿಕ ಕೆತ್ತನೆಯಿಲ್ಲ ಈ ಕೋಟೆಯಲ್ಲಿ ಬಾಗಿಲುಗಳು ಮೇಲೆ ಅಪ್ರಕಟಿತ ಶಾಸನವು ಕಂಡುಬರುತ್ತವೆ. ಇವು ಅರೇಬಿಕ ಶಾಸನವಾಗಿದೆ ಈ ಶಾಸನವು ಈ ಕೋಟೆಯನ್ನು ಕ್ರಿ.ಶ 1784–1785ರ ವೇಳೆಯಲ್ಲಿ ನಿರ್ಮಿಸಲಾಯಿತೆಂದು ಉಲ್ಲೇಖಿಸುತ್ತದೆ.

ಈ ಕೋಟೆಯಲ್ಲಿ ಅನೇಕ ಕೊಳಗಳು ಕಂಡುಬರುತ್ತವೆ. ಈ ಕೊಳಗಳು ಸದಾಕಾಲ ನೀರನ್ನು ತುಂಬಿಕೊಂಡು ಕೋಟೆಯ ರಕ್ಷಣೆ ಮಾಡುತ್ತಿದ್ದ ಸೈನಿಕರಿಗೆ ಹಾಗೂ ಇತರ ಉದ್ದೇಶಗಳಿಗೆ ಉಪಯೋಗಿಸಲ್ಪಡುತ್ತಿದ್ದವು. ಈ ಕೋಟೆಯಲ್ಲಿ ಆಂಜನೇಯ ದೇವಾಲಯವಿದೆ. ಈ ದೇವಾಲಯದ ಮುಂಭಾಗದಲ್ಲಿ ಒಂದು ದೀಪಸ್ತಂಭವಿದೆ. ಇನ್ನೊಂದು ಈಶ್ವರ ದೇವಾಲಯ ಅನೇಕ ಸ್ಮಾರಕಗಳು ಕಂಡುಬರುತ್ತದೆ.

ಬಹದ್ದೂರ ಬಂಡೆ ಕೋಟೆಯು ಇಂದಿಗೂ ಸುಸ್ಥಿಯಲ್ಲಿದೆ. ಇದಕ್ಕೆ ಪ್ರಮುಖ ಕಾರಣ ಕೋಟೆಯ ರಚನೆಯಲ್ಲಿ ಬಳಿಸಿದ ತಂತ್ರ ತುಂಬಾ ವಿಸ್ಮಯಕರವಾದ ತಂತ್ರ ಈ ಕೋಟೆಯನ್ನು ವಶಪಡಿಸಿಕೊಂಡಂತಹ ಅರಸರು, ಅಧಿಕಾರಿಗಳ ಕಾಲದಲ್ಲಿ ಮತ್ತಷ್ಟು ಈ ಕೋಟೆಯನ್ನು ಸಂರಕ್ಷಿಸಿದರು.

**ಇರಕಲ್ಲಗಡ ಕೋಟೆ:**

ಕೊಪ್ಪಳ ಜಿಲ್ಲೆಯ ಚಿಕ್ಕ ಹಳ್ಳಿ ಇರಕಲಗಡಾ, ಚೌಕಾಕಾರದ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ದಾಖಲಾತಿಯಿಂದ ಇದು 14ನೇ ಶತಮಾನದ ನಿರ್ಮಾಣವೆಂದು ಹೇಳಬಹುದು. ವಿಜಯನಗರದ ತುಳು (ಸುರಪುರ ದೊರೆ) ವಂಶದ ನರಸನಾಯಕ ನೆಂಬುವವನು ಕಟ್ಟಿದ ಸುರಪುರ ಸಂಸ್ಥಾನದ ದೊರೆಯಾದ ಮೊಂಡುಗೈ ತಿಮ್ಮಪ್ಪನಾಯಕನಿಗೆ ಒಪ್ಪಿಸಿದನೆಂದು ತಿಳಿದು ಬರುತ್ತದೆ. ಈ ಕೋಟೆಯು ಆಯಕಟ್ಟಿನ ಜಾಗದಲ್ಲಿ ಕಟ್ಟಲ್ಪಟ್ಟಿದೆ. ಕೋಟೆಯ ಒಳಗಡೆ ಅರಮನೆಯ ಅವಶೇಷವಿದ್ದು ಇದು ಕಲ್ಲಿನ ಕಟ್ಟಡವಾಗಿದ್ದು ಇದು ಈಗ ಬಿದ್ದು ಹೋಗಿ ಅವಶೇಷಗಳು ಮಾತ್ರ ಉಳಿದಿರುತ್ತವೆ. ಇಲ್ಲಿ ಗುಪ್ತ ಗುಹೆಯಿದ್ದು ಇದ್ದಕ್ಕೆ ಒಂದೇ ಕಲ್ಲಿನ ಚಪ್ಪಡಿಯ ಹೊದಿಕೆಯಿದ್ದು ಒಳಗೆ ಇನ್ನೂರು ಜನ ಕುಳಿತುಕೊಳ್ಳುವಷ್ಟು ವಿಶಾಲವಾಗಿದೆ ಇದು ನಿಸರ್ಗ ನಿರ್ಮಿತವಾದುದಿರಬಹುದು. ಕೋಟೆಯ ಉತ್ತರದಲ್ಲಿ ಮದ್ದಿನ ಮನೆಯು ಆರು ಅಡಿ ಅಗಲವಾಗಿದೆ. 12 ಅಡಿ ಉದ್ದವಾಗಿ 8 ಅಡಿ ಆಳವಾಗಿದ್ದು ಭದ್ರವಾದ ಕಲ್ಲಿನಿಂದ ಚೌಕಾಕಾರವಾಗಿ ಕಟ್ಟಿ ಗಟ್ಟಿನಿಂದ ಒಳಗೆ ಲೇಪನ ಮಾಡಿದೆ. ಕೋಟೆಯ ಒಳಗೆ ಧಾನ್ಯಗಳ ಕಣಜವಿದ್ದು. ಮದ್ದಿನ ಮನೆ, ಮಧ್ಯ ಶಸ್ತ್ರ ಕೋಠಡಿ ಅರಮನೆಯಿದ್ದ ಸ್ಥಳದ ಮುಂದೆ ಮಾರುತಿ ವಿಗ್ರಹವಿದ್ದು ಇಲ್ಲಿ ನೋಡಲು ದೇವಸ್ಥಾನಗಳು ಇದ್ದ ಕುರುಹುಗಳು ಕಾಣುತ್ತವೆ. ಕೋಟೆಯ ಉತ್ತರ ಮತ್ತು ದಕ್ಷಿಣದ ಕಡೆ ಸೈನಿಕರು ಕುಳಿತುಕೊಳ್ಳಲು ಚಿಕ್ಕಗೂಡುಗಳಿವೆ. ಸೈನಿಕರು ವಿಶ್ರಾಂತಿ ಪಡೆಯಲು ಕಟ್ಟೆಗಳು, ತೋಪು ಹಾರಿಸಲು ಜಾಲಂಧ್ರಗಳು ಇವೆ. ಕೋಟೆ ಹತ್ತುವ ಮಾರ್ಗದಲ್ಲಿ ಒಂದು ವೀರಗಲ್ಲು ಒಂದು ಮಹಾಸತಿ ಕಲ್ಲು ವಿಗ್ರಹಗಳು ಇವೆ. ವೀರಗಲ್ಲು 3 ಅಡಿ ಉದ್ದ 2 ಅಡಿ ಅಗಲವಿದೆ. ವೀರನು ಕೈಯಲ್ಲಿ ಭರ್ಚಿಯನ್ನು ಹಿಡಿದುಕೊಂಡು ನಿಂತಿರುವನು. ಅವನ ಹೆಸರು ಸೋಮಲಿಂಗೇಶ್ವರ ಇನ್ನು ಮಹಾಸತಿಯ ಕಲ್ಲು 2 ಅಡಿ ಉದ್ದ 1 ಅಡಿ ಅಗಲವಾಗಿದ್ದು ಕುಳಿತುಕೊಂಡಿದ್ದಾಳೆ ಇವಳ ಹೆಸರು ಚೌಡಿಮಲ್ಲಮ್ಮ, ಇವರ ಮೆಲ್ಗಡೆ ಛತ್ರಿ ಆಕಾರವಾಗಿ ದೊಡ್ಡ ಬಂಡೆಗಲ್ಲು ಇರುತ್ತದೆ.

ಬಿಜಾಪುರ ಆದಿಲ್‌ಶಾಹಿ ಸೈನ್ಯಾಧಿಕಾರಿ ಅಲ್ಲಮಗಿರ ಮಹ್ಮದನು ಈ ಕೋಟೆಯನ್ನು ಮೊಸದಿಂದ ಗೆದ್ದುಕೊಂಡನೆಂದು ಹೇಳಲಾಗಿದೆ. ಮುಂದೆ 17ನೇ ಶತಮಾನಕ್ಕೆ ಮರಾಠ ದೊರೆ ಶಿವಾಜಿಯ ಸೈನಿಕರು ಗಜೇಂದ್ರಗಡದಿಂದ ದಕ್ಷಿಣ ಮುಖವಾಗಿ ಬಂದು ಕೊಪ್ಪಳ ಕೋಟೆಯನ್ನು ಗೆದ್ದು ತಮ್ಮ ವಶಕ್ಕೆ ತೆಗೆದುಕೊಂಡರು ಮುಂದೆ ಇದಕ್ಕೆ ಇರಕಲ್‌ಗಡವೆಂದು ನಂತರ ಈ ಊರಿಗೆ ವೀರಕಲ್ಲು ಇರಬಗಲ್ಲು, ಇರಕಲ್ಲಗಿರಿ, ಇರಕಲ್ಲು ಗಡಿಯಾಗಿ ಕೊನೆಗೆ ಇರಕಲ್‌ಗಡವಾಯಿತು.

**ಆನೆಗೊಂದಿ ಕೋಟೆ:**

ಇದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ವಿಜಯನಗರದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ರಾಮಾಯಣ ಕಾಲದಲ್ಲಿ ಕಿಷ್ಕಂದೆ ಎಂದು ಗುರುತಿಸಲಾಗಿದೆ. ಕಲ್ಯಾಣಿ ಚಾಲುಕ್ಯರು ಮತ್ತು ಹೋಯ್ಸಳರ ಕಾಲದಲ್ಲಿ ಪ್ರಮುಖನಗರ ಕುಮ್ಮಟದುರ್ಗದ ಕಂಪಿಲರಾಯ ಹಾಗೂ ಕುಮಾರ ರಾಮರ ಆಡಳಿತ ಕೇಂದ್ರವಾಗಿತ್ತು.

ಈ ಪ್ರದೇಶವು ವಿಜಯನಗರ ಅರಸರ ರಾಜಧಾನಿಯಾಗಿ, 1749 ರಲ್ಲಿ ಮರಾಠರ ವಶವಾಗಿ, 1774ರಲ್ಲಿ ಹೈದರಲಿಯ ವಶವಾಗಿ ಮತ್ತು 1786ರಲ್ಲಿ ಟಿಪು ಸುಲ್ತಾನನ ವಶವಾಯಿತು. 1790ರಲ್ಲಿ ಆನೆಗೊಂದಿ ಸಂಸ್ಥಾನವು ಸ್ಥಾಪನೆಯಾಗಿ 1948ರ ವರೆಗೆ ಆನೆಗೊಂದಿ ಅರಸರ ಆಳ್ವಿಕೆಗೂ ಒಳಪಟ್ಟಿತ್ತು.

ಈ ಕೋಟೆಯ ತುಂಗಭದ್ರೆಯ ಸ್ವಾಭಾವಿಕ ನೀರಿನಿಂದ ರಕ್ಷಣೆ ಕಲ್ಲು ಬಂಡೆಗಳಿಂದ ರಕ್ಷಣೆ ದೊರತಿದೆ, ಮುಖ್ಯ ಪ್ರವೇಶ ಈಶಾನ್ಯ ದಿಕ್ಕಿನಲ್ಲಿ ಇದೆ. ಇದರ ಸಮೀಪದಲ್ಲಿ ಸುಂಕದ ಬಾಗಿಲು ಇದೆ ಕೋಟೆಗಳ ಆವರಣದಲ್ಲಿ ಆಂಜನೇಯ, ವೀರಭದ್ರ, ರಂಗನಾಥ, ಜೈನ ಬಸದಿ ಗಗನ ಮಹಲ್, ಕಣಜ, ನೀರಿನ ಅರವಟ್ಟಿಗೆ, ಪುಷ್ಕರಣಿಗಳು ಕಂಡುಬರುತ್ತದೆ.

ಇವಲ್ಲದೆ ಕನಕಗಿರಿ ಕೋಟೆ, ಎಮ್ಮಿಗುಡ್ಡ ಕೋಟೆ, ಕಾಟಾಪುರ ಕೋಟೆ, ಯಲಬುರ್ಗಾ ಕೋಟೆ, ಮಾದಿನೂರು ಕೋಟೆ ಪ್ರಮುಖವಾಗಿವೆ. ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಕೋಟೆಗಳು ಕಲೆ ಮತ್ತು ವಾಸ್ತು ಶಿಲ್ಪ ಕ್ಷೇತ್ರದಲ್ಲಿ ತನ್ನದೆಯಾದ ಛಾಪನ್ನು ಮೂಡಿಸಿದೆ. ಆದರೆ ನಮ್ಮವರ ನಿರ್ಲಕ್ಷದಿಂದ ಗತವೈಭವ ಸಾರುವ ಕೋಟೆಗಳು ತಮ್ಮ ಮಹತ್ವವನ್ನು ಕಳೆದುಕೊಂಡು ಅಳವಿನ ಅಂಚಿನಲ್ಲಿವೆ. ಇತಿಹಾಸದ ವಿದ್ಯಾರ್ಥಿಗಳಾದ ನಾವು ಈ ಸ್ಮಾರಕಗಳ ರಕ್ಷಣೆ ಮತ್ತು ಮಹತ್ವ ಕುರಿತಂತೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಮೂಲಕ ರಕ್ಷಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ 'ಸ್ಮಾರಕಗಳ ರಕ್ಷಣೆ ನಮ್ಮೆಲ್ಲರ ಹೊಣೆ' ಎನ್ನುವ ದ್ಯೇಯೋದ್ದೇಶದೊಂದಿಗೆ ಸ್ಮಾರಕಗಳ ರಕ್ಷಿಸುವ ನಿಟ್ಟಿನಲ್ಲಿ ಈ ಪ್ರಬಂಧವನ್ನು ಪ್ರಸ್ತುತಪಡಿಸಲಾಗಿದೆ.

**ಆಕರಗ್ರಂಥಗಳು:**

1. ತಿರುಳ್ಗನ್ನಡ–"ಸವಿ–ಸಂಚಿಕೆ", ಪ್ರ.ಸಂ–ಎಚ್.ಎಸ್ ಪಾಟೀಲ್, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ, 1993.
2.ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಡಾ.ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010.
3. ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಪರಂಪರೆ, ಎಚ್.ಎಸ್ ಪಾಟೀಲ್, ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ, 2010.
4. ಕೊಪಣಸಿರಿ, ಸ್ಮರಣಸಂಚಿಕೆ, ಅಖಿಲ ಭಾರತ 78ನೇ ಕನ್ನಡ ಸಾಹಿತ್ಯ ಸಮ್ಮೆಳನ, ಗಂಗಾವತಿ, 2011.
5. ಕ್ಷೇತ್ರ ಕಾರ್ಯ.



**ಶ್ರೀಮತಿ. ಶುಭಾ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮದರ್ಜೆ ಕಾಲೇಜು, ಕೋಪ್ಪಳ.